ಮುಂಬಡ್ತಿ ಅನುಪಾತ/ ಪ್ರತಿಶತದನ್ವಯ ನಿರ್ಧಿಷ್ಟಪಡಿಸಲಾದ ಹುದ್ದೆಗಳ ಎದುರಿಗೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಅವರುಗಳನ್ನು ಸ್ಥಾನಪಲ್ಲಟ ಮಾಡದೇ ಅದೇ ಹುದ್ದೆಗಳಲ್ಲಿ ಮುಂದುವರಿಸತಕ್ಕದ್ದು. ಆದರೆ, ಅವರುಗಳು ಆ ಹುದ್ದೆಗಳನ್ನು ತೆರವುಗೊಳಿಸಿದ ಬಳಿಕ, ಅವುಗಳನ್ನು ಮುಂಬಡ್ತಿಗೆ ನಿರ್ಧಿಷ್ಟಪಡಿಸಲಾದ ಹುದ್ದೆಗಳೆಂದು ಪರಿಗಣಿಸತಕ್ಕದ್ದು.

(9) ಅದೇ ರೀತಿಯಲ್ಲಿ, ಈ ಅಧಿಕೃತ ಜ್ಞಾಪನವು ಜಾರಿಗೆ ಬರುವ ಪೂರ್ವದಲ್ಲಿ ಜಾರಿಯಲ್ಲಿದ್ದ ರಿಕ್ತಸ್ಥಾನ ಆಧಾರಿತ ಪದ್ಧತಿಯ ಅನುಸಾರ ಮುಂಬಡ್ತಿ ಹೊಂದಿರುವ ನೌಕರರು, ಒಂದು ವೇಳೆ ಈ ಅಧಿಕೃತ ಜ್ಞಾಪನದಲ್ಲಿ ಗೊತ್ತುಪಡಿಸಲಾದ ಹುದ್ದೆ ಆಧಾರಿತ ಪದ್ಧತಿಯ ಅನುಸಾರ ಮುಂಬಡ್ತಿಗೆ ನಿರ್ಧಿಷ್ಟಪಡಿಸಲಾದ ಹುದ್ದೆಗಳ ಅನುಪಾತ/ ಪ್ರತಿಶತಕ್ಕಿಂತಲು ಹೆಚ್ಚಿನ ಸಂಖ್ಯೆಯಲ್ಲಿದ್ದಲ್ಲಿ ಮತ್ತು ಅವರುಗಳು ನೇರ ನೇಮಕಾತಿ ಅನುಪಾತ/ ಪ್ರತಿಶತದನ್ವಯ ನಿರ್ಧಿಷ್ಟಪಡಿಸಲಾದ ಹುದ್ದೆಗಳ ಎದುರಿಗೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಅವರುಗಳನ್ನು ಸ್ಥಾನಪಲ್ಲಟ ಮಾಡದೇ ಅದೇ ಹುದ್ದೆಗಳಲ್ಲಿ ಮುಂದುವರಿಸತಕ್ಕದ್ದು. ಆದರೆ, ಅವರುಗಳು ಆ ಹುದ್ದೆಗಳನ್ನು ತೆರವುಗೊಳಿಸಿದ ಬಳಿಕ, ಅವುಗಳನ್ನು ನೇರ ನೇಮಕಾತಿಗೆ ನಿರ್ಧಿಷ್ಟಪಡಿಸಲಾದ ಹುದ್ದೆಗಳೆಂದು ಪರಿಗಣಿಸತಕ್ಕದ್ದು.

(10) ಈ ಅಧಿಕೃತ ಜ್ಞಾಪನವನ್ನು ಹೊರಡಿಸಲಾದ ದಿನಾಂಕವೂ ಒಳಗೊಂಡಂತೆ, ಅದಕ್ಕೆ ಪೂರ್ವದಲ್ಲಿ ನೇರ ನೇಮಕಾತಿಗಾಗಿ ಹುದ್ದೆಗಳನ್ನು ಬಿಡುಗಡೆಗೊಳಿಸಿದ್ದು, ನೇಮಕಾತಿಗಾಗಿ ಸಂಬಂಧಿಸಿದ ಆಯ್ಕೆ ಪ್ರಾಧಿಕಾರವು ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಿರುವ ಪ್ರಕರಣಗಳಿಗೆ ಈ ಅಧಿಕೃತ ಜ್ಞಾಪನದಲ್ಲಿನ ನಿರ್ದೇಶನಗಳು ಅನ್ವಯವಾಗುವುದಿಲ್ಲ.

6. ಮೇಲ್ಕಂಡ ಹುದ್ದೆ ಆಧಾರಿತ ಪದ್ಧತಿಯು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ನಿಗದಿಪಡಿಸಲಾದ ಅನುಪಾತ/ ಪ್ರತಿಶತದನ್ವಯ ವೃಂದದಲ್ಲಿರುವ ಒಟ್ಟು ಹುದ್ದೆಗಳನ್ನು ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಣ ಮಾಡಲು ಮಾತ್ರ ಸೀಮಿತವಾಗಿರುತ್ತದೆ. ನೇರ ನೇಮಕಾತಿ ಮೀಸಲಾತಿ ಮತ್ತು ಮುಂಬಡ್ತಿ ಮೀಸಲಾತಿ ನೀತಿಯು ಪ್ರಸ್ತುತ ಜಾರಿಯಲ್ಲಿರುವಂತೆ ರಿಕ್ತಸ್ಥಾನ ಆಧಾರಿತವಾಗಿಯೇ ಮುಂದುವರೆಯುತ್ತದೆ.

7. ಈ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಉದಾಹರಣೆಯ ರೂಪದಲ್ಲಿ ಒಂದು ದೃಷ್ಟಾಂತವನ್ನು ಈ ಕೆಳಗೆ ನೀಡಲಾಗಿದೆ:

'ಬ' ಎಂಬ ವೃಂದ ಒಂದಕ್ಕೆ ಅನ್ವಯವಾಗುವ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನಿಗದಿತ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ನಿಗದಿಪಡಿಸಲಾದ ಅನುಪಾತ 50:50 ಇದ್ದು, ಆ ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ವೃಂದ ಬಲ) 315 ಇರುತ್ತದೆ. ಹುದ್ದೆ ಆಧಾರಿತ ತತ್ವದನ್ವಯ ಸದರಿ ಹುದ್ದೆಗಳನ್ನು ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ಈ ಕೆಳಕಂಡಂತೆ ವರ್ಗೀಕರಣ ಮಾಡಿ ಹಂಚಿಕೆ ಮಾಡತಕ್ಕದ್ದು:

| ಕ್ರ ಸಂ. | ಬಾಬತ್ತು | ನೇರ ನೇಮಕಾತಿ | ಮುಂಬಡ್ತಿ |
|---|---|---|---|
| (1) | (2) | (3) | (4) |
| 1 | ನೇರ ನೇಮಕಾತಿ ಮತ್ತು ಮುಂಬಡ್ತಿಯ ಮುಖಾಂತರ ನೇಮಕವಾಗಿ ಸದರಿ ವೃಂದದಲ್ಲಿನ ಹುದ್ದೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ | 33 | 93 |
| 2 | ರಿಕ್ತಸ್ಥಾನ ಆಧಾರಿತ ತತ್ವದ ಪ್ರಕಾರ ನೇರ ನೇಮಕಾತಿ ಮತ್ತು ಮುಂಬಡ್ತಿಯ ಮುಖಾಂತರ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳು. | 189<br>(ನೇರ ನೇಮಕಾತಿಯು ಕಾಲ ಕಾಲಕ್ಕೆ ಜರುಗದ ಕಾರಣ ನೇರ ನೇಮಕಾತಿ ಅನುಪಾತದ ಪ್ರಕಾರ ನೇರ ನೇಮಕಾತಿಗೆ ಹೆಚ್ಚಿನ ರಿಕ್ತಸ್ಥಾನಗಳು ಲಭ್ಯವಾಗಿವೆ. ಉದಾಹರಣೆಗೆ, ಒಂದು ಬ್ಲಾಕ್ ಅವಧಿಯಲ್ಲಿ 30 ರಿಕ್ತಸ್ಥಾನಗಳು ಲಭ್ಯವಾಗಿದ್ದಲ್ಲಿ, ಆ ಅವಧಿಯಲ್ಲಿ 15 ರಿಕ್ತಸ್ಥಾನಗಳನ್ನು ಮುಂಬಡ್ತಿಯ ಮುಖಾಂತರ ಭರ್ತಿ ಮಾಡಿದ್ದಲ್ಲಿ ಮತ್ತು ನೇರ ನೇಮಕಾತಿಗೆ ವರ್ಗೀಕರಿಸಲಾದ 15 ರಿಕ್ತಸ್ಥಾನಗಳನ್ನು ನೇರ ನೇಮಕಾತಿಯ ಮುಖಾಂತರ ಭರ್ತಿ ಮಾಡದೇ ಇದ್ದಲ್ಲಿ, ಭರ್ತಿ ಮಾಡದ ಆ ರಿಕ್ತಸ್ಥಾನಗಳನ್ನು ಮುಂದಿನ ಬ್ಲಾಕ್ ಅವಧಿಗೆ ಕೊಂಡೊಯ್ಯಲಾಗಿದ್ದು, ಅದರ ಪರಿಣಾಮವಾಗಿ ನೇರ ನೇಮಕಾತಿಗಾಗಿ ಹೆಚ್ಚಿನ ರಿಕ್ತಸ್ಥಾನಗಳು ಲಭ್ಯವಾಗಿರುತ್ತವೆ). | 0<br>ರಿಕ್ತಸ್ಥಾನ ಆಧಾರಿತ ಪದ್ಧತಿಯ ಪ್ರಕಾರ ಒಂದು ಬ್ಲಾಕ್ ಅವಧಿಯಲ್ಲಿ ಲಭ್ಯವಾಗುವ ರಿಕ್ತಸ್ಥಾನಗಳನ್ನು ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಣ ಮಾಡಿದ ಸಂದರ್ಭದಲ್ಲಿ, ಮುಂಬಡ್ತಿಗೆ ವರ್ಗೀಕರಿಸಿ ಲಭ್ಯವಾದ ಎಲ್ಲಾ ರಿಕ್ತ ಸ್ಥಾನಗಳನ್ನು ಮುಂಬಡ್ತಿಯ ಮುಖಾಂತರ ಭರ್ತಿ ಮಾಡಿರುವುದರಿಂದ ಮುಂಬಡ್ತಿಯ ವರ್ಗೀಕರಣದಲ್ಲಿ ರಿಕ್ತಸ್ಥಾನಗಳು ಲಭ್ಯವಿರುವುದಿಲ್ಲ. |
| 3 | ಹುದ್ದೆ ಆಧಾರಿತ ಪದ್ಧತಿಯ ಪ್ರಕಾರ ನೇರ ನೇಮಕಾತಿ ಮತ್ತು ಮುಂಬಡ್ತಿಯ ಮುಖಾಂತರ ಭರ್ತಿ ಮಾಡಬೇಕಾದ ಹುದ್ದೆಗಳ ಹಂಚಿಕೆ. | 157 | 158 |

